ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 49-52
©*IIMRD*, Mysuru
www.iimrd.com

# ಬೆರಳ್ಗೆ ಕೊರಳ್ ನಾಟಕ: ಒಂದು ಪಕ್ಷಿನೋಟ

**ಡಾ. ಪುಟ್ಟೇಶ್ ಸಿ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು

**ಸಾರಾಂಶ: (Abstract)**

*'ಬೆರಳ್ಗೆ ಕೊರಳ್' ನಾಟಕವು ಸಮಕಾಲೀನ ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ವಾಸ್ತವತೆ, ಮಾನವ ಸಂಬಂಧಗಳು ಹಾಗೂ ಮೌಲ್ಯ ಸಂಘರ್ಷಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಪ್ರಮುಖ ಕೃತಿಯಾಗಿದೆ. ಈ ಲೇಖನವು ನಾಟಕದ ಕಥಾವಸ್ತು, ಪಾತ್ರಚಿತ್ರಣ, ಭಾಷಾಶೈಲಿ ಮತ್ತು ನಾಟಕೀಯ ವಿನ್ಯಾಸವನ್ನು ಪಕ್ಷಿನೋಟದ ದೃಷ್ಟಿಯಿಂದ ವಿಶ್ಲೇಷಿಸುತ್ತದೆ. ನಾಟಕದಲ್ಲಿರುವ ಸಾಮಾಜಿಕ ಅಸಮಾನತೆ, ಅಧಿಕಾರದ ದುರುಪಯೋಗ ಹಾಗೂ ವ್ಯಕ್ತಿಯ ಅಂತರಂಗದ ಸಂಘರ್ಷಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಲಾಗಿದೆ. ಲೇಖಕರ ಕಲಾತ್ಮಕ ಅಭಿವ್ಯಕ್ತಿ ಮತ್ತು ಸಂಭಾಷಣಾ ಶೈಲಿಯು ನಾಟಕದ ಪರಿಣಾಮವನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಕನ್ನಡ ರಂಗಭೂಮಿಯ ಬೆಳವಣಿಗೆಯಲ್ಲಿ ಈ ನಾಟಕದ ಸ್ಥಾನ ಮತ್ತು ಸಾಹಿತ್ಯಿಕ ಮಹತ್ವವನ್ನು ಈ ಅಧ್ಯಯನವು ಒತ್ತಿ ಹೇಳುತ್ತದೆ. ನಾಟಕದ ವೈಚಾರಿಕತೆ ಹಾಗೂ ಸಮಕಾಲೀನ ಪ್ರಸ್ತುತತೆಯನ್ನು ಅರ್ಥಮಾಡಿಕೊಳ್ಳಲು ಈ ಲೇಖನವು ಸಹಕಾರಿಯಾಗಿದೆ.*

**ಮುಖ್ಯಪದಗಳು (Keywords):** *ಬೆರಳ್ಗೆ ಕೊರಳ್, ಕನ್ನಡ ನಾಟಕ, ಪಾತ್ರಚಿತ್ರಣ, ಸಾಮಾಜಿಕ ವಿಮರ್ಶೆ, ರಂಗಭೂಮಿ ಅಧ್ಯಯನ*

## ಪೀಠಿಕೆ

ರಾಷ್ಟ್ರಕವಿ ಕುವೆಂಪು ಅವರ 'ಬೆರಳ್ಗೆ ಕೊರಳ್' ನಾಟಕವು ಪ್ರಾಚೀನ ಹಾಗೂ ನಾವೀನ್ಯತೆಯ ನಡುವೆ ರಸ ಸೇತುವೆಯನ್ನು ನಿರ್ಮಿಸಿದೆ. ಮಹಾಭಾರತ ಕಥೆಯಲ್ಲಿ ಬರುವ ಏಕಲವ್ಯನ ಜೀವನಕಥಾಹಂದರವೇ ನಾಟಕದ ವಸ್ತುವೆನಿಸಿದೆ. ಈ ನಾಟಕವು ಗುರುತತ್ವ, ಕರ್ಮತತ್ವ, ಯಜ್ಞತತ್ವ ಎಂಬ ಮೂರು ತತ್ವಗಳ ಸಂರಚನೆಯನ್ನು ಒಳಗೊಂಡಿದೆ. ನಾಟಕದ ಪ್ರಾರಂಭವು ಮನೋಜ್ಞವಾಗಿದ್ದು ಪ್ರಾತಃ ಕಾಲದ ಮಬ್ಬುಗತ್ತಲೆಯನ್ನು "ಗುರುಬ್ರಹ್ಮ ಗುರುವಿಷ್ಣು ಗುರುದೇವೊ ಮಹೇಶ್ವರಃ ಗುರುಸಾಕ್ಷಾತ್ ಪರಬ್ರಹ್ಮ ತತ್ವಶ್ರೀ ಗುರುವೇ ನಮಃ" ಎಂಬ ಗುರುಸ್ತುತಿಯು ಕತ್ತಲೆಯನ್ನು ತಿಳಿಗೊಳಿಸುತ್ತದೆ. ಆ ಸುಂದರ ಸನ್ನಿವೇಶದಲ್ಲಿ ತನು ಮನವೆಲ್ಲದರಲ್ಲೂ ಗುರುಮಯವಾಗಿರುವ ಏಕಲವ್ಯನಿಗೆ ಅರಿವೇ ಗುರು ಎನಿಸುತ್ತದೆ. ಗುರುಭಕ್ತಿಯ ಮಹತ್ತಿನ ಸತ್ವವರಿತ ಕಾಡ ಹುಡುಗನಿಗೆ ಅಡವಿಯೇ ನೆಚ್ಚಿನ ತಾಣ. ಗುರುವಿನ ಆಗಮನದಿಂದ ಇಲ್ಲಿನ ವನಸ್ಥಳವೆಲ್ಲವೂ ಪವಿತ್ರವೆನ್ನುವ ಆತನ ಮುಗ್ಧತೆ ಈ ನಾಟಕದಲ್ಲಿ ಮೆಚ್ಚುವಂತಹದು.

*Please cite this article as:* ಪುಟ್ಟೇಶ್, ಸಿ. (2026). ಬೆರಳ್ಗೆ ಕೊರಳ್ ನಾಟಕ: ಒಂದು ಪಕ್ಷಿನೋಟ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 49–52

ನಾಗರಿಕ ಜಗತ್ತಿನ ಪರಿಚಯವಿಲ್ಲದ ಏಕಲವ್ಯನಿಗೆ ಮುಪ್ಪಡರಿದ ಮುದ್ದು ಮಾತೆಯ ಒಲವು ಹಿರಿದಾಗಿ ಕಾಣುತ್ತದೆ. ಈತನಿಗಾದರೋ ಸರಸ ವಿರಸಗಳೆಲ್ಲವೂ ನಿರ್ಮಲ ಹೃದಯಿ ತಾಯಿಯೊಂದಿಗೆಯೆ. ಇವಳಿಗೆ ಗಂಡನ ಅಳಿವಾದ ಮೇಲೆ ಮಗನೇ ಸರ್ವಸ್ವವೆನಿಸುತ್ತಾನೆ. ಬೆಳಗಿನುಣಿಸಿಗೆ ಮಗನಿಗಾಗಿ ತಂಗಳ ಹೊತ್ತೂಟವನ್ನು ತರುವ ತಾಯಿಯ ಮೃದು ಮಧುರವಾದ ಜೇನು ಅಪ್ಯಾಯವೆನಿಸಿದರೂ ಸೇವಿಸಲು ಅವನ ವ್ರತಅಡ್ಡ ಬರುತ್ತದೆ. ಬಾಲ್ಯದ ಆಟಗಳೊಂದಿಗೆ ತಾಯಿಯನ್ನು ಸ್ವಾಗತಿಸುವ ಎಳೆಯ ಬೇಡ ಹುಡುಗನಿಗೆ ಗುರುವಿನ ಧ್ಯಾನ ಮಹತ್ತರ ವಾದುದೆನಿಸುತ್ತದೆ. ಹಸಿವು ಬಾಯಾರಿಕೆಗಳು ಬಾಧಿಸದ ಏಕಲವ್ಯನಿಗೆಗುರುವೇ ಸರ್ವಸ್ವ, ಆತನ ಪ್ರೇಮಮಯ ಬದುಕಿನಲ್ಲಿಗುರುಶ್ರೇಷ್ಠರ ಮೂರ್ತರೂಪ ಶಿಲೆಯ ಬೊಂಬೆ ಮಾತ್ರ, ಅದು ಅವನಿಗೆ ಕೇವಲ ಮೂರ್ತಿಯಾಗಿರದೆ ಬಿಲ್ಲು ಬಾಣಗಳಿಗೆ ದಿಕ್ಕು ತೋರಿಸಿದ ಪ್ರತ್ಯಕ್ಷ ದೈವವೆನಿಸುತ್ತದೆ. ಇಂತಹ ಪ್ರಕೃತಿಯ ನೀರವತೆಯ ನಡುವಿನ ಅರಸನಂತೆ ಬೆಳೆಯುತ್ತಿರುವ ಬೇಡ ಹುಡುಗನಿಗೆ ಹಮ್ಮು ಬಿಮ್ಮುಗಳಿಲ್ಲ. ಅಲ್ಲಿರುವ ಖಗ ಮೃಗಗಳೆಲ್ಲವೂ ಈತನಿಗೆ ಬಂಧುಗಳಂತೆ. ಆದರೆ ತಾಯಿಗಾದರೋ ಗುರುದ್ರೋಣರ ಚಿತ್ರಗಳನ್ನು ಬಿಡಿಸಿರುವುದು ಮಕ್ಕಳಾಟವಷ್ಟೆ, ಮಾತ್ರವಲ್ಲ 'ಆಡಿಕೊಳ್ಳುವಷ್ಟು ಆಡಲಿ ಬಿಡು ಅಣುಗನ' ಎನ್ನುವ ನಿರ್ಮಲ ಭಾವ ಅವಳದು. ಆದರೆ ಏಕಲವ್ಯನು ನದಿಯು ಕೊರೆದಿರುವ ಪೊಟರೆಯಲ್ಲಿ ಬಚ್ಚಿಟ್ಟು ತಾಯಿಯನ್ನು ಸತಾಯಿಸುವ ಸನ್ನಿವೇಶದ ಸಂಭಾಷಣೆಯು ಈ ನಾಟಕದಲ್ಲಿ ನಾಗರೀಕ ಪ್ರಪಂಚದಾಚೆಗಿನ ಕಾಡ ಜಗತ್ತಿನ ಕೌತುಕವೆನಿಸುತ್ತದೆ.

ಆ ತಾಯಿಯ ದೃಷ್ಟಿಯಲ್ಲಿ ಏಕಲವ್ಯನಿಗೆ ಹಸಿವು ಬಾಯಾರಿಕೆಗಳನ್ನು ಮರೆಯಿಸುವ ಶಕ್ತಿ ಆ ಪ್ರಕೃತಿಗಿದೆ ಎಂಬುದು ತಿಳಿಯದುದೇನಲ್ಲ. ಅದು ಅವನಿಗೆ ಒಳಿತೇ ಹೊರತುಕೇಡೆಂಬುದಿಲ್ಲ ಎನ್ನುವ ಅರಿವು ತಾಯಿಗೆ ಇದ್ದೇ ಇದೆ. ಆದರೂ ಆಕೆಗೆ ಅಕ್ಕರೆಯ ಮಗ ಇವನು. ಮಗನಿಗಾದರೋ ತಾಯಿಯ ಅಕ್ಕರೆಯಪ್ಪಿದ ಜೇನೂಟವೆಂದೆನಿಸಿದರೂ ನೋಂಪಿಯ ನಂತರವಷ್ಟೇ ಉಣಿಸು ಎಂಬ ಅವನ ಆಲೋಚನೆ ತಾಯಿಗೆ ಅರಿಯದು. ಕಾಡಿಗೆ ಗುರುವಿನ ಬರುವಿಕೆಯು ಮಗನಿಂದ ತಿಳಿದರೂ ಅವಳ ತಿಳಿವಿಗೆ ನಿಲುಕದು. ಆ ತಾಯಿಯ ದೃಷ್ಟಿಯಲ್ಲಿ ಗುರುವೆಂದರೆ ದೇವರ ಮರಿಯೆಂಬ ಭಾವನೆ, ಏಕೆಂದರೆ ಬೇಡನ ತಾಯಿ ಕಾಡ ಪ್ರಕೃತಿಯ ಸಿರಿ ಸೊತ್ತಿಗೆಯಲ್ಲಿ ಬೆಳೆದು ಅಲೆಯುತ್ತಿರುವವಳು. ಇವಳಿಗೆ ಬೇಟೆಯನ್ನುಳಿದು ಉಳಿದ ವ್ಯಾಪಾರದ ಬಗೆಗಿನ ತಿಳುವಳಿಕೆ ಸಾಲದೆನಿಸುತ್ತದೆ. ಗುರುವೆಂದರೆ ಅದಾವುದೋ ಹೊಸ ದೇವರು ಅಥವಾ ದೇವರಮರಿ ಎಂದು ತಿಳಿದಿರುವ ಸುಪ್ತ ಪ್ರಜ್ಞೆ ಆ ತಾಯಿಯದು. ಅದಕ್ಕೆ ಏಕಲವ್ಯನು ನೀಂ ಸಾಕುವಾ ಕೋಳಿಯೋ ಅದು ಮರಿಯಿಕ್ಕಲು ಎಂದು ಹಾಸ್ಯ ಮಾಡುತ್ತಾನೆ. ಹೀಗೆ ಇವರಿಬ್ಬರ ಹಾಸ್ಯದ ನಡುವೆಯೇ ಜಿಂಕೆಯು ತಾಯಿ ಹೊತ್ತು ತಂದ ಊಟದ ಸವಿನೋಡುತ್ತಿರುತ್ತದೆ. ಅದನ್ನು ಕಂಡ ತಾಯಿಗೆ ಜಿಂಕೆಯ ಧೈರ್ಯ ಮಿಗಿಲಾಗಿ ತೋರುತ್ತದೆ. ಅದನ್ನರಿತ ತಾಯಿಯು ಜಿಂಕೆಯನ್ನು ಕುರಿತು 'ಇಂತಲೆಯೆ ಕಾಡನ್ನು ಒರ್ದಿನಂ ತೋಳನುಣಿಸಪ್ಪೆ ನೀನ್' ಎಂದು ಮೃಗವನ್ನು ಒಡೆಯಲು ಬರುತ್ತಾಳೆ.

ಆಗ ಏಕಲವ್ಯನು ಜಿಂಕೆಯನ್ನು ಮಗುವನೆತ್ತಿಕೊಳ್ಳುವಂತೆ ಎತ್ತಿಕೊಂಡು ಮುದ್ದಿಸುತ್ತಾನೆ. ಅಲ್ಲದೆ ಈ 'ನನ್ನ ಮಲೆಯೊಳ್ ತೋಳನೆಲ್ಲಿಕುರ್ಂ ಮನಬಂದಂತೆ ನೀನ್ ಅಲೆ ನಿನ್ನ ಮೈಗಾವಲಿಗೆ ನಾನಿದ್ದೇನೆ' ಎನ್ನುವ ಆತನ ಮಾತು ಅವನ ಪ್ರಾಣಿ ಪ್ರೀತಿಗೆ ಹಿಡಿದ ಕನ್ನಡಿಯಂತಿದೆ. ತಾನು ಬೇಟೆಗಾರನಾದರೂ ಆ ಜಿಂಕೆಯನ್ನು ರಕ್ಷಿಸಬೇಕೆನ್ನುವ ಈತನಿಗೆ ರಕ್ಷಕನಿಲ್ಲದಿರುವುದೇ ವಿಪರ್ಯಾಸವೆನಿಸುತ್ತದೆ. ಇಷ್ಟೆಲ್ಲಾ ಹಾಸ್ಯದ

ನಡುವೆಯೇ ಗುರುವಿನ ಬರುವಿಕೆಯನ್ನು ಅರ್ಥೈಸಿದ ತಾಯಿಗೆ ಆತಂಕ ಇಲ್ಲದಿಲ್ಲ. ತನ್ನ ಮಗನನ್ನು ನಾಡಿಗೆ ಕರೆದೊಯ್ದರು. ಅರಸರಿಗೆ ಕೆಳೆಯಾಗಿ ಮಾಡುವರು ಎನ್ನುವ ಭಯ ಭಯ ಇದ್ದೇ ಇದೆ. ಆದರೆ ಏಕಲವ್ಯನಿಗೆ ಗುರುವಿನ ಆಗಮನವು ಆಪ್ಯಾಯಮಾನವೆನಿಸುತ್ತದೆ. ಆ ಸುಂದರಕ್ಷಣಕ್ಕಾಗಿ ಅವನು ಸಾಕ್ಷಾತ್ ದೈವವನ್ನೆ ಎದುರು ಗೊಳ್ಳುವಂತೆ ಸಜ್ಜುಗೊಂಡಿದ್ದಾನೆ. ಆದರೆ ಈತನ ಗುರುಭಕ್ತಿಯೂ ಕಾರಣವೆನಿಸುತ್ತದೆ. ತಾನು ಶೂದ್ರನೆಂದು ತಿಳಿದು ನನಗೆ ವಿದ್ಯೆ ಕಲಿಸುವುದನ್ನು ಕ್ಷಾತ್ರಪುತ್ರರು ತಿರಸ್ಕರಿಸುವರು. ಆ ಸನ್ನಿವೇಶದ ಇಂಬನ್ನು ಅರಿತ ಗುರು ಏಕಲವ್ಯನಿಗೆ ಉಪಾಯವಿತ್ತಿದ್ದೇನೂ ಸುಳ್ಳಲ್ಲ. 'ನೀನೆನ್ನ ಮನೆಯೊಳಗಾಳಾಗಿರು ಈ ಗರುಡಿಗೆ ಸೇವೆಗೈತರುತೆ ದೂರದಿಂದಲೇ ಕಂಡು ಕಲಿ, ಕಲ್ವನಿತಂ. ಅಳಲದಿರ್, ಆಸಗೆಡದಿರ್' ಎಂದು ಏಕಲವ್ಯನನ್ನು ಸಮಾಧಾನಿಸುವರು.

ಆ ಸಂದಿಗ್ಧ ಪರಿಸ್ಥಿತಿಯಲ್ಲೂ ಕಾಡ ಮಗನಿಗೆ ಅಶ್ವತ್ಥಾಮನೊಡನೆ ವಿದ್ಯೆಯನ್ನು ಕಲಿಸುತ್ತೇನೆಂಬ ಹಂಬಲ ಗುರುವಿನದು. ಇದನ್ನರಿತೆ ಪ್ರಕೃತಿ ಪುತ್ರನಿಗೆ ಗುರುವಿನ ಬಗೆಗೆ ಅತೀವ ಪ್ರೀತಿ. ಅದಕ್ಕೂ ಮಿಗಿಲು ಆತನ ಗುರು ಭಕ್ತಿ. ಆದರೊಳಗೆ ಮುಳುಗಿ ಮೀಯುತ್ತಿರಲು ಕಾಡ ಜನರ ಕಹಳೆಯ ದನಿ ಗುರುದ್ರೋಣನ ಬರುವಿಕೆಯನ್ನು ಖಚಿತಗೊಳಿಸುತ್ತದೆ. ಎರಡನೆಯ ದೃಶ್ಯ ಕರ್ಮತತ್ವದಲ್ಲಿ ಗುರು ದಟ್ಟಡವಿಯಲ್ಲಿ ಸರಿದಾರಿ ಅರಸಿ ಬರಲಾರದೆಹಾದಿ ತಪ್ಪುತ್ತಾನೆ. ಅವರ ಜೊತೆಯಲ್ಲಿದ್ದ ತನ್ನ ಪುತ್ರನನ್ನು ಕುರಿತು 'ಬಟ್ಟೆಯಿರದೆಡೆ ಬಟ್ಟೆಯನರಸುತಿರ್ಪಯ್' ಎಂದು ಹೇಳುವ ಆ ಮಾತು ಮಹಾಭಾರತದುದ್ದಕ್ಕೂ ಅಶ್ವತ್ಥಾಮನ ದುಡುಕುತನವನ್ನು ಪ್ರತಿಬಿಂಬಿಸುವಂತಿದೆ. ಅಲ್ಲದೆ ಅಂತಹ ಗುಣ ಅವನಿಗೆ ಹುಟ್ಟಿನಿಂದಲೇ ಬಂದಿರಬೇಕು ಎಂದು ಹಾಸ್ಯ ಮಾಡುವನು. ಅದಕ್ಕೆ ಪ್ರತಿಯಾಗಿ ಅಶ್ವತ್ಥಾಮನು ಕಾಡೆಂದರೆ ಆನೆ ಊರಿನ ಉದ್ಯಾನವಲ್ಲ ಎಂದೇ ಛೇಡಿಸಿ ಒಂದು ಕಲ್ಲಿನ ಮೇಲೆ ತಂದೆಯನ್ನು ಕೂರಿಸುತ್ತಾನೆ. ತಾನು ಕಾಡಿನ ದಾರಿಯನ್ನು ಹುಡುಕುವ ಸಲುವಾಗಿ ಹೊರಡುವನು. ಆ ವೇಳೆಗೆ ಏಕಾಂತವಾಗಿ ಕಲ್ಲಿನ ಮೇಲೆ ಕುಳಿತ ದ್ರೋಣನಿಗೆ ಹತ್ತಾರು ಪ್ರಶ್ನೆಗಳು ಅಂತರಂಗದಲ್ಲಿ ಉದಿಸುತ್ತವೆ. ಆದರೆ ಅವುಗಳು ಏಕಲವ್ಯನು ಸಂಭ್ರಮಿಸಲು ಕಾರಣವಾದ ಪ್ರಶ್ನೆಗಳಾಗಿರಲಾರವು. ಗುರುವಿನ ಅಂತರಂಗದ ಬೇಗುದಿಯಲ್ಲಿ ಬೆಂದ ನಾಲಗೆಯಿಂದ ಉದುರಿದ ತೊದಲು ನುಡಿಗಳು.

ಈ ಕಾರಣದಿಂದಲೇ ಗುರುವು ಶಿಷ್ಯನನ್ನ ಅರಸಿ ಕಾಡಿಗೆ ಬಂದಿರುವುದು ಅಲ್ಲಿ ಶಿಷ್ಯನ ಜಾಣೆಯನ್ನು ಮೆಚ್ಚುವುದಕ್ಕಲ್ಲ. ಬದಲಿಗೆ ಬಲೆಯನ್ನು ಕಡಿದು ಹಾಕಲು. ಅಲ್ಲದೆ ಅರ್ಜುನನಿಗೆ ಹಿಡಿದಿರುವ ಕೀರ್ತಿಶನಿಗೆ ಬಲ ತುಂಬುವುದಕ್ಕಾಗಿ. ಹಿಂದೆ ದ್ರುಪದನ ವಿಷಯದಲ್ಲಿ ಪಾರ್ಥನ ಹಂಗಿಗೆ ಒಳಗಾದದ್ದೇ ಇಂದು ನಿರಪರಾಧಿ ಏಕಲವ್ಯನಿಗೆ ಮುಳುವಾಗಿ ಪರಿಣಮಿಸಿದೆ. ದ್ರೋಣನು ಅರ್ಜುನನ ಕೀರ್ತಿಯನ್ನು ಮೆರೆಯಲು ರಾಯಭಾರಿತನ ಮಾಡಲು ಬಂದಿರುವುದೇನೋ ಸ್ಪಷ್ಟವಾಗುತ್ತದೆ. ಇದರಿಂದ ರಕ್ಷಿಸುವ ಬಗೆ ಹೇಗೆ. ಅದಕ್ಕೆ ಅವನ ಮಿತ್ರನಾದ ಅಶ್ವತ್ಥಾಮನನ್ನು ಸಮಾಧಾನಿಸಿ ಕಾರ್ಯ ಸಾಧಿಸಲು ಅವನನ್ನು ತಪ್ಪಿಸುವುದು ಸಾಧ್ಯವೇ? ಇಷ್ಟೆಲ್ಲಾ ಪ್ರಶ್ನೆಗಳಿಗೆ ಗುರುವಿನಲ್ಲಿ ಉತ್ತರವಿಲ್ಲ. ಆದರೂ ಅರ್ಜುನನ ಮಚ್ಚರದ ಉರಿದಹಿಸುವ ಮುನ್ನ ಏನಾದರೊಂದು ಉಪಾಯ ಮಾಡಬೇಕೆನ್ನುವುದು ಅವನ ತಾಯ್ತನದ ಪ್ರತೀಕವೆನಿಸುತ್ತದೆ. ಆ ವೇಳೆಗೆ ದಾರಿಯುಡುಕಿ ಬರುವ ಅಶ್ವತ್ಥಾಮನು ತಂದೆಯ ಗುಟ್ಟನ್ನು ಅರಿಯುತ್ತಾನೆ. ಅದರಿಂದ ಸಿಡಿಮಿಡಿಗೊಳ್ಳುತ್ತಾನೆ. ಆ ಸಂದರ್ಭದಲ್ಲಿ ತನ್ನ ತಂದೆಯ ಸ್ಥಿತಿಯ ಅರಿವಾಗುತ್ತದೆ. ಇದರಿಂದ ಕುಪಿತನಾದ

ಅಶ್ವತ್ಥಾಮನಿಗೆ ಸಮಾಧಾನಿಸುತ್ತಾನೆ. ಅಲ್ಲದೆ ಏಕಲವ್ಯನಿಗೆ ಕೇಡಾಗದ ರೀತಿಯಲ್ಲಿ ಕಾರ್ಯ ನಡೆಸುತ್ತೇನೆಂದು ಭರವಸೆ ನೀಡುತ್ತಾನೆ.

ಕೊನೆಯ ದೃಶ್ಯದಲ್ಲಿ ಅರ್ಜುನನ ಕೀರ್ತಿಶನಿಗೆ ಏಕಲವ್ಯನ ಹೆಬ್ಬೆರಳನ್ನು ನೀಡುವ ಸಂದರ್ಭ ಮನಕಲಕುತ್ತದೆ. ಇದುಗುರುವಿನ ಮೇಲೆ ಇಟ್ಟಿರುವ ನಿರ್ಮಲ ಭಕ್ತಿಗೆ ಸಂದ ಗೌರವವಲ್ಲವೇ? ಎನ್ನಿಸುತ್ತದೆ. ಗುರು ತಾನು ಬಂದಿರುವುದರ ಉದ್ದೇಶವೇನು? ಎಂಬುದುಗುರುಕಾಣಿಕೆಯ ಹೆಸರಿನಲ್ಲೆ ಅಂತರದಲ್ಲಿ ಹುದುಗಿದ್ದ ಸತ್ಯ ಹೊರಹೊಮ್ಮುತ್ತದೆ. ಆ ವಿಪತ್ತನ್ನು ಸಂತೋಷದಿಂದಲೇ ಸ್ವೀಕರಿಸುವ ಏಕಲವ್ಯನು ತನ್ನ ಕನಸನ್ನು ಗುರುವಿಗೆ ಅರಹುತ್ತಾನೆ. ನೀಲ ದೇಹಿಯ ಅಪೇಕ್ಷೆಯ ಮೇರೆಗೆ ತನ್ನ ಸರ್ವಸ್ವವನ್ನು ತ್ಯಾಗ ಮಾಡಲು ಸಿದ್ಧನಾದವನಿಗೆ ಕೇವಲ ಹೆಬ್ಬರಳ ನೀಡುವುದು ಅದಾವಗಹನದ ಮಾತೆನಿಸುತ್ತದೆ. ಆದರೂ ಏಕಲವ್ಯನು ಗುರುವಿನ ಔದಾಯವನ್ನು ನೆನೆದು ಮರುಗುತ್ತಾನೆ ಮಾತ್ರವಲ್ಲ ಗುರುಕಾಣಿಕೆಯನ್ನುತಡ ಮಾಡದೆ ಕೊಡಲು ನಿರ್ಧರಿಸುತ್ತಾನೆ. ಕ್ಷಣ ಮಾತ್ರದಲ್ಲಿಯೇ ಗುರುದ್ರೋಣನ ಕಣ್ಣೆದುರಿನಲ್ಲಿ ತನ್ನ ಬತ್ತಳಿಕೆಯಿಂದ ಅಗಲವೂ ಹಾಗೂ ಹರಿತವಾದ ಬಾಣವೊಂದನ್ನು ಸೆಳೆದು ತನ್ನ ಬೆರಳನ್ನು ಕತ್ತರಿಸುತ್ತಾನೆ. ತುಂಡಾದ ಆ ಬಲಗೈ ಹೆಬ್ಬೆರಳು ರಕ್ತದ ಮಡುವಿನಲ್ಲಿ ಬೀಳುತ್ತದೆ.

ಈ ದೃಶ್ಯವನ್ನು ಕಣ್ಣಾರೆ ಕಂಡು ಜರ್ಜರಿತನಾಗುತ್ತಾನೆ. ಆದರೂ ವೃದ್ಧದ್ರೋಣನು ನೆತ್ತರ ಜಲದೊಳಗೆ ಶಿಷ್ಯನ ಹೆಬ್ಬೆರಳನ್ನು ನೋಡುತ್ತಾನೆ. ಆ ಕ್ಷಣದಲ್ಲಿ ಅನಿರೀಕ್ಷಿತವಾದೊಂದು ಚಿತ್ರಣ ಕಂಡು ಗುರು ಬೆರಗಾಗುತ್ತಾನೆ. ಅದೆಂದರೆ ರಕ್ತದ ಕೆಸರಿನ ಪ್ರತಿಬಿಂಬದಲ್ಲಿ ಕಂಡ ತನ್ನ ಕೊರಳನ್ನು ಬಲವಾದ ಹಸ್ತವೊಂದು ಕತ್ತರಿಸಿದ ಚಿತ್ರವು ನಡುಗಿಸಿಡುತ್ತದೆ. ಇದು ಏಕಲವ್ಯನ ಬೆರಳಿಗೆ ತನ್ನ ಬಲಿಯೆಂಬ ಮುನ್ಸೂಚನೆ, ದ್ರೋಣನ ಅರಿವಿಗೆ ಬಾರದೇ ಇರದು. ಕ್ಷಣ ಮಾತ್ರದಲ್ಲಿ ನಡೆದುಹೋದ ಈ ಘಟನೆ ನಾನು ಮಾಡಿದಕರ್ಮದ ಫಲವೋ, ಏಕಲವ್ಯನ ತಾಯಿಯ ಶಾಪದ ಕಾಣೆಯೋಎಂದು ಮಮ್ಮಲ ಮರುಗುವನು.

ಈ ಸನ್ನಿವೇಶವನ್ನು ಅರಿತ ಕುವೆಂಪು ಅವರು ಈ ನಾಟಕದಲ್ಲಿ ಹೇಳುವ ಮಾತು ಸಾರ್ವಕಾಲಿಕವೆನಿಸುತ್ತದೆ. 'ಕರ್ಮದ ಪಾಂಗು ಮರಿಗೆ ಮರಿ ಮರಿಗೆ ಮರಿ ಮರಿಯಿಕ್ಕುತಿರ್ಕ್ಕುಂ' ಎಂಬಂತೆ ದ್ವೇಷ, ಅಸೂಯೆ, ಮಚ್ಚರ ಇವೆಲ್ಲವೂ ಮಹಾಭಾರತದ ಉದ್ದಕ್ಕೂ ಅನುರಣಿಸುತ್ತದೆ. ಹಾಗೆಯೇ ಲೌಕಿಕದಲ್ಲಿಯೂ ಸಹ ಇದು ಸಾಮಾನ್ಯವೆನಿಸುತ್ತದೆ. ಕುವೆಂಪು ಅವರು ಪ್ರಸ್ತುತ ನಾಟಕಕ್ಕೆ ಆಯ್ಕೆ ಮಾಡಿಕೊಂಡದ್ದು ಮಹಾಭಾರತದ ಏಕಲವ್ಯನ ಕಥೆಯ ಸಣ್ಣತುಣುಕು. ಅದರ ಮೂಲಕ ಅವರು ಹೇಳಹೊರಟಿದ್ದು ಮಾತ್ರ ಅಗಾಧವಾದದ್ದೆನಿಸುತ್ತದೆ. ಎಲ್ಲ ಕಾಲಗಳಲ್ಲಿಯೂ ಪ್ರಭುತ್ವದ ಬಿ ಸಾಮಾನ್ಯರನ್ನು ಬಲಹೀನಗೊಳಿಸುವ ಸನ್ನಿವೇಶವನ್ನು 'ಬೆರಳ್ಗೆ ಕೊರಳ್' ನಾಟಕದಲ್ಲಿ ಪ್ರತಿಮಾತ್ಮಕ ವಿಧಾನದಲ್ಲಿ ಕುವೆಂಪು ಅವರು ಕಟ್ಟಿಕೊಟ್ಟಿದ್ದಾರೆ.

**ಆಕರ ಗ್ರಂಥಗಳು**


- ಕುವೆಂಪು. (1973). ಬೆರಳ್‌ಗೆ ಕೊರಳ್. ಉದಯರವಿ ಪ್ರಕಾಶನ.
- ಲಂಕೇಶ್, ಪಿ. (2010). *ಕ್ರಾಂತಿ ಬಂತು ಕ್ರಾಂತಿ ಮತ್ತು ಗಿಳಿಯು ಪಂಜರದೊಳಿಲ್ಲ: ಲಂಕೇಶರ ನಾಟಕಗಳು.* ಲಂಕೇಶ್ ಪ್ರಕಾಶನ.